ಸಂಪುಟ : 40 ಸಂಚಿಕೆ:336 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 04 ಜನವರಿ 2018 ಗುರುವಾರ POST REG NO . L-2/RNP- 364/TMR/2015-17 ಪುಟಗಳು :10 ಬೆಲೆ ₹ 2.50

ತುಮಕೂರು | Tumakuru

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳ ಪ್ರಾದೇಶಿಕ ದಿನಪತ್ರಿಕೆ

ಪ್ರಜಾ ಪ್ರಗತಿ

ಉಪ ಸಂಪಾದಕರು : ಟಿ.ಎನ್.ಮಧುಕರ್

ಸಂಪಾದಕರು : ಎಸ್. ನಾಗಣ್ಣ

E-mail : For News: prajapragathi1@gmail.com
Web : prajapragathi.com

ಹಿಂದುಳಿದ, ಸಾಮಾನ್ಯ ವರ್ಗದ ಪ್ರಥಮ ಪದವಿ, ಡಿಪ್ಲೋಮಾ ವಿದ್ಯಾರ್ಥಿಗಳಿಗೂ ಉಚಿತ ಲ್ಯಾಪ್ ಟಾಪ್:ಸಿಎಂ ಸಿದ್ದರಾಮಯ್ಯ

ವಿವರ : ಪುಟ 05

ಕೆಪಿಟಿಸಿಎಲ್ ನೇಮಕಾತಿಯಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಿರುವುದು ಹೆಮ್ಮೆಯ ವಿಷಯ : ಎಸ್.ಜಿ.ಸಿದ್ದರಾಮಯ್ಯ

ವಿವರ : ಪುಟ 05

ಆಧಾರ್ ಮೂಲಕ 9 ಲಕ್ಷ ನಕಲಿ ರೇಷನ್ ಕಾರ್ಡ್‌ಗಳು ರದ್ದು : ಆಹಾರ ಖಾತೆ ಸಚಿವ ಯು.ಟಿ.ಖಾದರ್

ವಿವರ : ಪುಟ 05

ಕಾಂಗ್ರೆಸ್ ಮತ್ತು ಬಿಜೆಪಿ ಜೊತೆ ಹಂಗಿನ ಸರ್ಕಾರ ಬೇಡ : ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ

ವಿವರ : ಪುಟ 05

Gold 916 ₹ 2785/–
Silver ₹41000/–
ಸೂರ ಜ್ಯುಯಲರ್ಸ್
Ashoka Road, Tumkur
Ph: 0816 4022274

ವೆಂಕೋಬ್ ಕೋಳಿ ಧಾರಣೆ

ಫಾರಂ ಕೋಳಿ 1 ಕೆಜಿಗೆ ರೂ.86 /-
ರಿಟೈಲ್ ಮಾರಾಟದ ದರ ಕೆ.ಜಿ.ಗೆ ರೂ. 106 /-

ವಿತ್‌ಸ್ಕಿನ್	ವಿತೌಟ್ ಸ್ಕಿನ್
ರೂ.154 / -	ರೂ.175 / -

ಡಜನ್ ಮೊಟ್ಟೆಗೆ ರೂ.50 / -

ತುಮಕೂರು ಪಾಲಿಕೆ ಮೀಸಲಾತಿ ಪ್ರಕಟ

ಮೇಯರ್-'ಎಸ್ಸಿ', ಉಪಮೇಯರ್-'ಸಾಮಾನ್ಯಮಹಿಳೆ'

ತುಮಕೂರು

ತುಮಕೂರು ಮಹಾನಗರ ಪಾಲಿಕೆಯ ಮುಂದಿನ ಹಾಗೂ ಕೊನೆಯ ಅವಧಿಯ ಮೇಯರ್ ಸ್ಥಾನಕ್ಕೆ ಮೀಸಲಾತಿ ಯಾವುದಾಗಬಹುದೆಂಬ ಜಿಜ್ಞಾಸೆ ಮಹಾನಗರ ಪಾಲಿಕೆಯ ಒಳಗೆ ಮತ್ತು ಹೊರಗೆ ತೀವ್ರಗೊಂಡಿರುವಾಗಲೇ, ರಾಜ್ಯ ಸರ್ಕಾರ ಮೀಸಲಾತಿಯನ್ನು ಪ್ರಕಟಿಸಿದೆ. ಆ ಪ್ರಕಾರ ಮೇಯರ್ ಹುದ್ದೆಯನ್ನು ''ಪರಿಶಿಷ್ಟ ಜಾತಿ''ಗೆ (ಎಸ್.ಸಿ.) ಮತ್ತು ಉಪಮೇಯರ್ ಹುದ್ದೆಯನ್ನು ''ಸಾಮಾನ್ಯ ಮಹಿಳೆ''ಗೆ (ಜನರಲ್ ವುಮೆನ್) ಮೀಸಲಿರಿಸಲಾಗಿದೆ.

ಹೊಸವರ್ಷದ ಮೊದಲನೇ ದಿನವಾದ ಜ.1 ರಂದು ಪ್ರಕಟಿಸಿರುವ 'ಕರ್ನಾಟಕ ರಾಜ್ಯಪತ್ರ' (ಗೆಜೆಟ್)ದಲ್ಲಿ ರಾಜ್ಯದ ಎಲ್ಲ 11 ಮಹಾನಗರ ಪಾಲಿಕೆಗಳ ಮೀಸಲಾತಿಯನ್ನು ಪ್ರಕಟಿಸಿದ್ದು, ಅದರಲ್ಲಿ ತುಮಕೂರು ಮಹಾನಗರ ಪಾಲಿಕೆಯದ್ದು ಈ ರೀತಿ ಇದೆ.

ಹಾಲಿ ಮೇಯರ್ ಎಚ್.ರವಿಕುಮಾರ್ (ಜೆಡಿಎಸ್) ಅವರ ಒಂದು ವರ್ಷದ ಅಧಿಕಾರಾವಧಿ ಫೆಬ್ರವರಿ ಮೊದಲ ವಾರದಲ್ಲಿ ಅಂತ್ಯಗೊಳ್ಳಲಿದೆ. ಹೀಗಾಗಿ ಹೊಸ ಮೀಸಲಾತಿ ಸರ್ಕಾರದಿಂದ ನಿಗದಿ ಆಗಿದೆ.

ಮೀಸಲು ಬದಲಿಗೆ ಯತ್ನ?

ಪಾಲಿಕೆಯ ಮೇಯರ್ ಹುದ್ದೆಯನ್ನು ಪರಿಶಿಷ್ಟ ಜಾತಿಗೆ ಮೀಸಲಿರಿಸಿರುವುದು ಸಹಜವಾಗಿ ರಾಜಕೀಯ ಮಹತ್ವ ಪಡೆಯುತ್ತಿದೆ. ಇದೀಗ ಚುನಾವಣಾ ವರ್ಷವೂ ಆಗಿರುವುದರಿಂದ ಬಹುಮುಖ ಲೆಕ್ಕಾಚಾರದ ಚರ್ಚೆಗೂ ಎಡೆಮಾಡಿಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಹಾಲಿ ಇರುವ ಮೀಸಲಾತಿಯನ್ನು ಬದಲಿಸಿ, ಅದನ್ನು ಸಾಮಾನ್ಯ ವರ್ಗಕ್ಕೆ (ಜನರಲ್ ಕ್ಯಾಟಗರಿ) ಮೀಸಲಿಡಲು ರಾಜಕೀಯವಾಗಿ ದೊಡ್ಡ ಯತ್ನ ನಡೆದಿದೆಯೆಂಬ ವದಂತಿ ಪಾಲಿಕೆಯ ಒಳಗೆ ಮತ್ತು ಹೊರಗೆ ಹರಡಿದೆ.

ಒಂದು ವೇಳೆ ಸಾಮಾನ್ಯ ವರ್ಗಕ್ಕೆ ಮೀಸಲಾದರೆ, ಪಾಲಿಕೆಯ ಎಲ್ಲ 35 ಚುನಾಯಿತ ಸದಸ್ಯರೂ ಸ್ಪರ್ಧಿಸಬಹುದಾಗಿರುತ್ತದೆ. ಆದರೂ ಕಾಂಗ್ರೆಸ್‌ನಿಂದ ಎಂ.ಪಿ.ಮಹೇಶ್ (14 ನೇ ವಾರ್ಡ್) ಅವರು ಸ್ಪರ್ಧಿ ಆಗಬಹುದು ಎಂದು ಹೇಳಲಾಗುತ್ತಿದೆ. ರಾಜಕೀಯವಾಗಿ ಭಾರಿ ಮಹತ್ವಾಕಾಂಕ್ಷೆ ಹೊಂದಿರುವ ಬಿಜೆಪಿಯ ಬಿ.ಎಸ್.ನಾಗೇಶ್ (4 ನೇ ವಾರ್ಡ್) ಆರಂಭದಿಂದಲೂ ಮೇಯರ್ ಸ್ಥಾನದ ಮೇಲೆ ಕಣ್ಣಿಟ್ಟಿದ್ದು, >>> 7ನೇ ಪುಟಕ್ಕೆ

ಯಾರು-ಯಾರಿಗೆ ಅವಕಾಶ?

ಮೇಯರ್ ಸ್ಥಾನವು ಪರಿಶಿಷ್ಟ ಜಾತಿಗೆ ಮೀಸಲಾಗಿರುವುದರಿಂದ, ಆ ವರ್ಗಕ್ಕೆ ಸೇರಿರುವ ಕಾಂಗ್ರೆಸ್‌ನ ಸುಧೀಶ್ವರ್ (9 ನೇ ವಾರ್ಡ್); ಜೆಡಿಎಸ್‌ನ ಹನುಮಂತರಾಯಪ್ಪ (ಎಚ್.ಆರ್., 20 ನೇ ವಾರ್ಡ್) ಮತ್ತು ಜಿ.ಎಚ್.ಲೋಕೇಶ್ (35 ನೇ ವಾರ್ಡ್); ಬಿಜೆಪಿಯ ಎಂ.ಎನ್. ವೆಂಕಟೇಶ್ (11 ನೇ ವಾರ್ಡ್) ಅವರಿಗೆ ಸ್ಪರ್ಧಿಸುವ ಅವಕಾಶವಿರುತ್ತದೆ. ಆದರೆ ಮೇಯರ್ ಆಗುವ ಅದೃಷ್ಟ ಮಾತ್ರ ಪಕ್ಷಗಳ ನಡುವಿನ ಹೊಂದಾಣಿಕೆಯನ್ನು ಅವಲಂಬಿಸಿದೆ. ಜೊತೆಗೆ ಅದನ್ನು ಮೀರಿದ ''ಬಲಾಬಲ''ವನ್ನೂ ಅದು ಒಳಗೊಂಡಿದೆ. ಉಪಮೇಯರ್ ಹುದ್ದೆಯು ಸಾಮಾನ್ಯ ಮಹಿಳೆಗೆ ಮೀಸಲಾಗಿರುವುದರಿಂದ ಪಾಲಿಕೆಯ ಯಾವುದೇ ಮಹಿಳಾ ಸದಸ್ಯೆ ಸ್ಪರ್ಧಿಸಬಹುದಾಗಿರುತ್ತದೆ. ಇಲ್ಲೂ ಸಹ ಈ ಹುದ್ದೆಯು ಪಕ್ಷಗಳ ನಡುವಿನ ಹೊಂದಾಣಿಕೆಯನ್ನೇ ಅವಲಂಬಿಸಿರುವುದರಿಂದ, ಈಗಲೇ ಖಚಿತವಾಗಿ ಏನನ್ನೂ ಹೇಳಲಾಗದ ಪರಿಸ್ಥಿತಿ ಇದೆ.

ಹಫ್ತಾ ವಸೂಲಿ ಎಂದಿದ್ದು ಯಾರು?

''ಈ ಹಿಂದೆ ಕಾಂಗ್ರೆಸ್‌ನ ಗೀತಾರುದ್ರೇಶ್ ಅವರು ಮೇಯರ್ ಆಗಿದ್ದಾಗ, ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಕಾಂಗ್ರೆಸ್ ಶಾಸಕರ ವಿರುದ್ಧವೇ ಹಫ್ತಾವಸೂಲಿ ಎಂದು ಆರೋಪಿಸಿದ್ದವರು ಯಾರು? ಪರಿಶಿಷ್ಟ ಜಾತಿಗೆ ನೀಡುವ ಲ್ಯಾಪ್ ಟಾಪ್ ಸೌಲಭ್ಯವನ್ನು ತನ್ನ ಕುಟುಂಬದ ಸದಸ್ಯರಿಗೇ ಕೊಡಿಸಿಕೊಂಡ ಆರೋಪ ಹೊತ್ತವರು ಯಾರು?'' ಎಂಬಂತಹ ಕೆಲವೊಂದು ಪ್ರಶ್ನೆಗಳು ಮತ್ತೆ ಚಲಾವಣೆಗೊಂಡು ಇದೀಗ ಕಾಂಗ್ರೆಸ್ ಸದಸ್ಯರ ವಲಯದಲ್ಲಿ ಹರಿದಾಡುತ್ತಿದ್ದು, ಇದೂ ಸಹ ಮೇಯರ್ ಚುನಾವಣೆಯಲ್ಲಿ ಪರಿಣಾಮ ಬೀರಲಿದೆ ಎನ್ನಲಾಗುತ್ತಿದೆ.

ಗಣಿ ರೆಡ್ಡಿ - ಬೆಂಬಲಿಗರನ್ನು ಪಕ್ಷದಿಂದ ದೂರವಿಡಲು ನಿರ್ಧಾರ

ಬೆಂಗಳೂರು

ಭ್ರಷ್ಟಾಚಾರ ಪ್ರಕರಣಗಳಿಂದ ಕೆಂಗೆಟ್ಟಿರುವ ಬಿಜೆಪಿ ಇದೀಗ ಗಣಿ ರೆಡ್ಡಿ ಮತ್ತವರ ಬೆಂಬಲಿಗರನ್ನು ದೂರವಿಡಲು ಗಂಭೀರ ಕ್ರಮಗಳನ್ನು ಕೈಗೊಂಡಿದೆ.

ಕಳೆದ 2008ರ ವಿಧಾನಸಭಾ ಚುನಾವಣೆಯಲ್ಲಿ ಬಳ್ಳಾರಿ, ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಅತಿ ಹೆಚ್ಚು ಸ್ಥಾನಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದ ಗಣಿ ರೆಡ್ಡಿ ಪಡೆಯನ್ನು ಈ ಬಾರಿ ಅತ್ಯಂತ ವ್ಯವಸ್ಥಿತವಾಗಿ ದೂರವಿಡಲು ಬಿಜೆಪಿ ಹೈಕಮಾಂಡ್ ಮುಂದಾಗಿದೆ.

ರೆಡ್ಡಿ ಬಣ ಇರುವ ಕಡೆಗಳಲ್ಲಿ ಪರ್ಯಾಯ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಹೈಕಮಾಂಡ್ ಮುಂದಾಗಿದ್ದು, ಇದರ ಪರಿಣಾಮ ಅವರ ಹಿಂಬಾಲಕರು ಇದೀಗ ಪರ್ಯಾಯ ಮಾರ್ಗದತ್ತ ಹೊರಳುತ್ತಿದ್ದಾರೆ.

ರೆಡ್ಡಿ ಬಣದ ದಂಡನಾಯಕ ಜನಾರ್ಧನ ರೆಡ್ಡಿ ಅವರನ್ನು ಈಗಾಗಲೇ ಪಕ್ಷದಿಂದ ದೂರ ಇಡಲಾಗಿದೆ. ಇನ್ನು ಹೊಸಪೇಟೆಯ ಶಾಸಕ ಆನಂದ್ ಸಿಂಗ್ ಕ್ಷೇತ್ರದಲ್ಲಿ ಪರ್ಯಾಯ ಅಭ್ಯರ್ಥಿಯನ್ನು ಕಣಕ್ಕಿಳಿಸಲು ವರಿಷ್ಠರು ಕ್ರಮ ಕೈಗೊಂಡಿದ್ದಾರೆ. ಬಿಜೆಪಿ ಜತೆ ಗುರುತಿಸಿಕೊಂಡಿದ್ದ ಕೂಡ್ಲಗಿಯ ಪಕ್ಷೇತರ ಶಾಸಕ ಬಿ. ನಾಗೇಂದ್ರ ಕೂಡ ಇದೀಗ ಕಾಂಗ್ರೆಸ್ ಇಲ್ಲವೆ ಬೇರೆ ಮಾರ್ಗದತ್ತ ಆಲೋಚನೆ ಮಾಡುತ್ತಿದ್ದಾರೆ.

ಸಧ್ಯಕ್ಕೆ ಬಿ. ಶ್ರೀರಾಮುಲು ಮಾತ್ರ ಬಿಜೆಪಿ ಜತೆ ಸಕ್ರಿಯವಾಗಿದ್ದಾರೆ. ಅವರಿಗೂ ಸಹ ಪಕ್ಷದ ಆಪ್ತ ವಲಯದಲ್ಲಿ ಅಷ್ಟೇನು ಮನ್ನಣೆ ದೊರೆಯುತ್ತಿಲ್ಲ. ರೆಡ್ಡಿ ಪಡೆಯಿಂದ ಅಂತರ ಕಾಯ್ದುಕೊಂಡಿರುವ ಮಾಜಿ ಸಚಿವ ಕರುಣಾಕರ ರೆಡ್ಡಿ ಅವರಿಗೆ ಮತ್ತೆ ಸ್ಪರ್ಧಿಸಲು ಟಿಕೆಟ್ ದೊರೆಯುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಸಹ ವ್ಯಕ್ತವಾಗಿದೆ.

ಈ ಬೆಳವಣಿಗೆಗಳನ್ನು ಗಮನಿಸಿದಾಗ ವರಿಷ್ಠರು ರೆಡ್ಡಿ ಬಣವನ್ನು ದೂರವಿಡಲು ವ್ಯವಸ್ಥಿತ ತಂತ್ರ ರೂಪಿಸಿರುವುದು ಸ್ಪಷ್ಟವಾಗಿದೆ. ಈ ಬಾರಿಯ ಚುನಾವಣೆಯಲ್ಲಿ ಟಿಕೆಟ್ ನೀಡುವ ಜವಾಬ್ದಾರಿಯನ್ನು ಅಮಿತ್ ಷಾ ಅವರೇ ಹೊತ್ತುಕೊಂಡಿದ್ದಾರೆ. ಹೀಗಾಗಿ ರೆಡ್ಡಿ ಪಡೆಗೆ ಟಿಕೆಟ್ ದೊರೆಯುವುದು ಅನುಮಾನವಾಗಿದೆ. ಈ ಸಂಕೇತ ಸಿಕ್ಕಿರುವುದರಿಂದ ನಾಗೇಂದ್ರ, ಆನಂದ್ ಸಿಂಗ್ ಬಿಜೆಪಿಯಿಂದ ದೂರ ಸರಿಯಲು ನಿರ್ಧರಿಸಿದ್ದಾರೆ. ಬಳ್ಳಾರಿ ನಗರದಲ್ಲೂ ರೆಡ್ಡಿ ಪಡೆಯವರಿಗೆ ಟಿಕೆಟ್ ನೀಡದಿರಲು ಹೈಕಮಾಂಡ್ ನಿರ್ಧರಿಸಿದ್ದು, ಇವರ ಪರ ಮಧ್ಯಸ್ಥಿಕೆ ವಹಿಸಲು ಯಾರಿಗೂ ಸಾಧ್ಯವಾಗದ ಪರಿಸ್ಥಿತಿ ಇದೆ.

ರಾಜ್ಯಸಭೆಯಲ್ಲಿ ತಲಾಖ್ ಮಂಡನೆ

TALAQ
TALAQ
TALAQ

ನವದೆಹಲಿ

ಕೇಂದ್ರ ಕಾನೂನು ಸಚಿವ ರವಿಶಂಕರ್ ಪ್ರಸಾದ್ ಅವರು ರಾಜ್ಯಸಭೆಯಲ್ಲಿ ತ್ರಿವಳಿ ತಲಾಖ್ ಮಸೂದೆಯನ್ನು ಮಂಡಿಸಿದರು. ಮಹಾರಾಷ್ಟ್ರದಲ್ಲಿನ ಹಿಂಸಾಚಾರದ ಬಗ್ಗೆ ಪ್ರತಿಪಕ್ಷಗಳು ಧ್ವನಿ ಎತ್ತಿದಾಗ ಈ ಮಸೂದೆಯನ್ನು ಮಂಡಿಸಿದರು. ಗದ್ದಲ ಏರ್ಪಟ್ಟ ಹಿನ್ನೆಲೆಯಲ್ಲಿ ಕಲಾಪವನ್ನು ಗುರುವಾರಕ್ಕೆ ಮುಂದೂಡಲಾಯಿತು. ಲೋಕಸಭೆಯಲ್ಲಿ ಈಗಾಗಲೇ ಈ ಮಸೂದೆಗೆ ಬೆಂಬಲ ವ್ಯಕ್ತವಾಗಿದೆ.

ಹಿಂಸಾಚಾರದ ಹಿಂದೆ ಆರ್.ಎಸ್.ಎಸ್. ಕೈವಾಡ

ದೆಹಲಿ

ಬೀಮ್ ಕೋರೆಗಾಂವ್ ಹಿಂಸಾಚಾರ ಪ್ರಕರಣ ಲೋಕಸಭೆಯಲ್ಲಿ ಪ್ರತಿಧ್ವನಿಸಿದ್ದು, ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಈ ಹಿಂಸಾಚಾರದ ಹಿಂದೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕೈವಾಡವಿದೆ ಎಂದು ಗಂಭೀರ ಆರೋಪ ಮಾಡಿದರು. ಮಹಾರಾ, ಮರಾಠರ ಬಗ್ಗೆ ವಿಷಬೀಜ ಬಿತ್ತಲಾಗುತ್ತಿದೆ. ಬಿಜೆಪಿ ಆಡಳಿತವಿರುವ ಪ್ರದೇಶಗಳಲ್ಲೇ ಹೆಚ್ಚು ಹಿಂಸಾಚಾರಗಳು ನಡೆಯುತ್ತಿವೆ. ಈ ಬಗ್ಗೆ ಸುಪ್ರೀಂಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಯಬೇಕು ಎಂದು ಆಗ್ರಹಿಸಿದರು.

ಮೇವಾನಿ, ಖಲೀಲ್ ವಿರುದ್ಧ ದೂರು ದಾಖಲು

ಪುಣೆ

ಭೀಮ ಕೋರೆಗಾಂವ್ ಯುದ್ಧದ 200ನೇ ವರ್ಷದ ಕಾರ್ಯಕ್ರಮದಲ್ಲಿ ಪ್ರಚೋದನಾಕಾರಿ ಭಾಷಣ ಮಾಡಿದ ಆರೋಪದ ಮೇರೆಗೆ ಗುಜರಾತ್ ಶಾಸಕ, ದಲಿತ ಹೋರಾಟಗಾರ ಜಿಗ್ನೇಶ್ ಮೇವಾನಿ ಹಾಗೂ ಜೆಎನ್‌ಯು ವಿ.ವಿ. ವಿದ್ಯಾರ್ಥಿ ಉಮರ್ ಖಲೀದ್ ವಿರುದ್ಧ ಪುಣೆಯಲ್ಲಿ ದೂರು ದಾಖಲಾಗಿದೆ. ಪುಣೆಯಲ್ಲಿ ಹುಟ್ಟಿಕೊಂಡ ಕಲಹ ರಾಜ್ಯಾದ್ಯಂತ ವ್ಯಾಪಿಸಿದ್ದು, ಹಲವು ಕಡೆಗಳಲ್ಲಿ ಪ್ರತಿಭಟನೆಗಳು ಮುಂದುವರೆದಿವೆ. ದಲಿತ ವ್ಯಕ್ತಿಯ ಹತ್ಯೆ ಖಂಡಿಸಿ ಮಹಾರಾಷ್ಟ್ರದಲ್ಲಿ ಕೆಲವು ಸಂಘಟನೆಗಳು ಬಂದ್‌ಗೆ ಕರೆ ನೀಡಿದ್ದವು.

ಬೆಂಗಳೂರು ಪ್ರೆಸ್ ಕ್ಲಬ್ ವತಿಯಿಂದ ಡಾ.ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರಿಗೆ 'ಶತಮಾನ ಶ್ರೀಗಳು' ಪ್ರಶಸ್ತಿಯನ್ನು ಶ್ರೀ ಕ್ಷೇತ್ರದಲ್ಲಿ ಬುಧವಾರ ಸಂಜೆ ಅರ್ಪಿಸಲಾಯಿತು. ಸುವರ್ಣ ಮಹೋತ್ಸವ ಸಂಭ್ರಮದಲ್ಲಿರುವ ಪ್ರೆಸ್ ಕ್ಲಬ್ ಆಫ್ ಬೆಂಗಳೂರು ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಈ ಬಾರಿ ವಿಶೇಷವಾಗಿ ಶ್ರೀಗಳನ್ನು ಗೌರವಿಸಿದೆ.

ಶ್ರವಣಬೆಳಗೊಳಕ್ಕೆ ಕೆಎಸ್‌ಆರ್‌ಟಿಸಿ ವಿಶೇಷ ಬಸ್

ತುಮಕೂರು

ಪ್ರಸಿದ್ಧ ಜೈನಕ್ಷೇತ್ರ ಶ್ರವಣಬೆಳಗೊಳದಲ್ಲಿ 2018ರ ಫೆಬ್ರವರಿಯಲ್ಲಿ ನಡೆಯಲಿರುವ ಈ ಶತಮಾನದ 2ನೇ ಮಹಾಮಸ್ತಕಾಭಿಷೇಕಕ್ಕೆ ಧರ್ಮನಗರಿ ಶ್ರೀಕ್ಷೇತ್ರ ಶ್ರವಣಬೆಳಗೊಳ ಸಜ್ಜುಗೊಂಡಿದ್ದು, ಈ ಸಂಬಂಧ ದೇಶ, ವಿದೇಶಗಳಿಂದ ಭಕ್ತ ಸಾಗರವೇ ಹರಿದು ಬರುತ್ತಿದ್ದು, ಈ ಸಂಬಂಧ ಪ್ರಯಾಣಿಕರ ಅನುಕೂಲಕ್ಕಾಗಿ ತುಮಕೂರು ಕೆಎಸ್‌ಆರ್‌ಟಿಸಿ ವಿಭಾಗ ತುಮಕೂರಿನಿಂದ ವಿಶೇಷ >>> 7ನೇ ಪುಟಕ್ಕೆ

ಶಿಕ್ಷಕರು ಕರ್ತವ್ಯಕ್ಕೆ ನ್ಯಾಯ ಒದಗಿಸಬೇಕು

ತುಮಕೂರು

ವೃತ್ತಿಜೀವನದಲ್ಲಿ ಸವಾಲುಗಳು ಕಠಿಣ ಮತ್ತು ಹೇರಳವಾಗಿರುತ್ತವೆ. ಶಿಕ್ಷಕರು ಸದಾ ಕ್ರಿಯಾಶೀಲರಾಗಿದ್ದು, ಅಧ್ಯಯನವನ್ನು ನಡೆಸಬೇಕು. ನಮ್ಮ ಕರ್ತವ್ಯಕ್ಕೆ ನಾವು ನ್ಯಾಯ ಒದಗಿಸಿದರೆ, ನಮ್ಮಿಂದ ಕಲಿತ ವಿದ್ಯಾರ್ಥಿಗಳು ಜೀವನದುದ್ದಕ್ಕೂ ಸ್ಮರಿಸುತ್ತಾರೆ ಎಂದು ಲೆಫ್ಟಿನೆಂಟ್ ಜನರಲ್ ರಮೇಶ್ ಅಲಗಲಿ ಅಭಿಪ್ರಾಯಪಟ್ಟರು.

ನಗರದ ಶ್ರೀ ಸಿದ್ದಗಂಗಾ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸಂಸ್ಕೃತಿ ಸಮಾರೋಪ ಸಮಾರಂಭದಲ್ಲಿ ಸಮಾರೋಪ ನುಡಿಗಳನ್ನಾಡಿದ ಅವರು, ವಿದ್ಯಾರ್ಥಿಗಳಲ್ಲಿ ಕಠಿಣ ಶ್ರಮದಿಂದ ಕಲಿಯಲು ಆಸಕ್ತಿ ಇಲ್ಲದಿದ್ದರೆ ಯಾವ ಶಿಕ್ಷಣ ಸಂಸ್ಥೆಯೂ ಸಹ ಉತ್ತಮ ಭವಿಷ್ಯವನ್ನು ಕಟ್ಟಿಕೊಡಲು ಸಾಧ್ಯವಿಲ್ಲ. ನಾವುಗಳು ಹೊರಗಡೆ ಹುಡುಕುವ ಬದಲಾವಣೆ, ಶಕ್ತಿ, ಯಶಸ್ಸು ನಮ್ಮಲ್ಲಿಯೇ ಇದೆ. ವಿದ್ಯಾರ್ಥಿಗಳು ತಾವು ಎಂತಹ ಪರಿಸ್ಥಿತಿಯಲ್ಲಿದ್ದರೂ ಯಾವುದೇ ವಾತಾವರಣದಲ್ಲಿ ಬೆಳೆದಿದ್ದರೂ ಸಹ ಹಿಂದಿರುಗಿ ನೋಡದ ದೃಢ ನಿರ್ಧಾರವನ್ನು ಕೈಗೊಳ್ಳಬೇಕು. ಆಗ ಮಾತ್ರ ಯಶಸ್ಸು ಸಿದ್ದಿಸುತ್ತದೆ. ಪ್ರತಿಯೊಬ್ಬರೂ ಓಟದ ಕುದುರೆಯಂತೆ ಗುರಿಯೆಡೆಗೆ ಗಮನವಿಟ್ಟು ಕೆಲಸಮಾಡಬೇಕೆಂದು ಕಿವಿಮಾತು ಹೇಳಿದರು. ಸಹಸ್ರಾರು ಸೈನಿಕರು ದೇಶಕ್ಕಾಗಿ ಪ್ರಾಣಾರ್ಪಣೆಯನ್ನು ಮಾಡಿದ್ದಾರೆ. ಹಾಗೆಯೇ ನನ್ನ ದೇಶಕ್ಕಾಗಿ ನಾನೇನು ಮಾಡಿದ್ದೇನೆ? ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬ ಭಾರತೀಯನೂ ಕೇಳಿಕೊಳ್ಳಬೇಕು ಎಂದು ನುಡಿದರು. ವಿದ್ಯಾರ್ಥಿಗಳು ಉತ್ತಮ ಮೌಲ್ಯಾದರ್ಶಗಳು, ಹೊಸತನದೆಡೆಗೆ ತುಡಿತ, ಸ್ವಯಂ ಪ್ರೇರಣೆ ಹಾಗೂ ಲೋಕೋಪಕಾರಿ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಹರೆಯದಲ್ಲಿರುವ ವಿದ್ಯಾರ್ಥಿಗಳು ಸಾಮಾಜಿಕ ಮಾಧ್ಯಮಗಳಿಂದ ವ್ಯಾಕುಲತೆಗೊಳಪಡುತ್ತಿದ್ದಾರೆ. ಸಮಾಜವು ಧರ್ಮ, ಜಾತಿ, ಭಾಷೆಗಳ ಆಧಾರದಲ್ಲಿ ವಿಭಜನೆಗೊಳ್ಳುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ದಿವ್ಯಸಾನ್ನಿಧ್ಯ ವಹಿಸಿ ಆಶೀರ್ವಚನವನ್ನು ನೀಡಿದ ಶ್ರೀ ಸಿದ್ದಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗಮಹಾಸ್ವಾಮೀಜಿ ವಿದ್ಯಾರ್ಥಿಗಳಿಗೆ ಏರ್ಪಡಿಸುವ ಸ್ಪರ್ಧೆಗಳು ಬಹುಮಾನಕ್ಕಾಗಿ ಮಾತ್ರವಲ್ಲ ಬದಲಿಗೆ ಸ್ಪರ್ಧಾಮನೋಭಾವವನ್ನು ಹೆಚ್ಚಿಸಲು ಅನುವು ಮಾಡಿಕೊಡುವಂತಹವುಗಳು. ಜೀವನದಲ್ಲಿ ಮೇಲೆ ಹೋದಷ್ಟೂ ಹೆಚ್ಚು ಹೆಚ್ಚು ಅವಕಾಶಗಳು ಒದಗಿಬರುತ್ತವೆ. >>> 7ನೇ ಪುಟಕ್ಕೆ

ಸಿದ್ದಗಂಗಾ ಮಹಿಳಾ ಪ.ಪೂ ಕಾಲೇಜಿನಲ್ಲಿ ನಡೆದ ಸಂಸ್ಕೃತಿ ಸಮಾರೋಪ ಸಮಾರಂಭವನ್ನು ಶ್ರೀ ಸಿದ್ದಲಿಂಗಮಹಾಸ್ವಾಮೀಜಿ ಉದ್ಘಾಟಿಸಿದರು. ಲೆಫ್ಟಿನೆಂಟ್ ಜನರಲ್ ರಮೇಶ್ ಅಲಗಲಿ, ಶ್ರೀ ಸಿದ್ದಗಂಗಾ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಟಿ.ಕೆ ನಂಜುಂಡಪ್ಪ, ಸಂಯೋಜನಾಧಿಕಾರಿ ಪ್ರೊ. ಜಿ.ಎಸ್. ರೇಣುಕಪ್ಪ, ನಟಿ ಸುಜಾತ, ಖೋಖೋ ಆಟಗಾರ್ತಿ ಚೇತನಾ, ಪ್ರಾಂಶುಪಾಲ ಹೆಚ್.ಡಿ ತಿಪ್ಪೇಸ್ವಾಮಿ ಹಾಗೂ ಇತರರು ಉಪಸ್ಥಿತರಿದ್ದರು.

> ವಿದ್ಯಾರ್ಥಿನಿಯರು ಮನೋರಂಜನೆ, ಸಾಮಾಜಿಕ ಮಾಧ್ಯಮಗಳಿಂದ ಹೊರಬಂದು ದೈಹಿಕ ದಾರ್ಢ್ಯತೆಯೆಡೆಗೂ ಗಮನಹರಿಸಬೇಕು. ಕ್ರೀಡಾ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿದ್ದು ಅವುಗಳನ್ನು ಬಳಸಿಕೊಳ್ಳಬೇಕು.
>
> ■ ಚೇತನಾ , ಖೋಖೋ ಆಟಗಾರ್ತಿ

ನಿಧಾನಗತಿಯಲ್ಲಿ ನಡೆಯುತ್ತಿರುವ ನಗರ ಒಳಚರಂಡಿ ಕಾಮಗಾರಿಗಳು

ಸ್ಥಳೀಯ ಸಂಸ್ಥೆಗಳಲ್ಲಿ ಆಮೆಗತಿಯ ಆರ್ಥಿಕ ಪ್ರಗತಿ

■ ಭೂಷಣ್ ಮಿಡಿಗೇಶಿ

ತುಮಕೂರು

ಜಿಲ್ಲೆಯ ಹತ್ತು ಸ್ಥಳೀಯ ಸಂಸ್ಥೆಗಳ ಪೈಕಿ ಶಿರಾ,ತುಮಕೂರು ನಗರದ ಎರಡನೇ ಹಂತದ ಒಳಚರಂಡಿ ಯೋಜನೆ,ಗುಬ್ಬಿ,ಕುಣಿಗಲ್ ಹಾಗೂ ತುಮಕೂರು ನಗರದಲ್ಲಿನ ಅಮೃತ್ ಯೋಜನೆಯ ಒಳಚರಂಡಿ ಯೋಜನೆಗಳು ಮತ್ತು ತುಮಕೂರು ನಗರದ 27x4 ಒತ್ತಡಸಹಿತ ನಿರಂತರ ನೀರು ಸರಬರಾಜು ಯೋಜನೆಗಳ ಕಾಮಗಾರಿಗಳಿಗೆಂದು ಸಾಕಷ್ಟು ಅನುದಾನ ಲಭ್ಯವಿದೆ. ಆದರೆ ಕಾಮಗಾರಿಗಳು ಆಮೆಗತಿಯಲ್ಲಿಯೇ ನಡೆಯುತ್ತಿವೆ. ಹೊಸಾ ರಸ್ತೆ ನಿರ್ಮಾಣವಾದ ನಂತರ ಅಗೆದು ಯುಜಿಡಿ ಮಾಡುವಂತಹ ಸಾಕಷ್ಟು ನಿದರ್ಶನಗಳೂ ನಗರಗಳಲ್ಲಿವೆ. ತುಮಕೂರು ನಗರವೂ ಇದಕ್ಕಿಂತ ಭಿನ್ನವೇನಲ್ಲ.ಇಡೀ 35 ವಾರ್ಡುಗಳಲ್ಲಿಯೂ ಒಂದಲ್ಲಾ ಒಂದು ಕಡೆ ರಸ್ತೆ ಅಗೆಯುವುದು,ಯುಜಿಡಿ ಕಾಮಗಾರಿ ಮಾಡುವುದು,ಮುಂತಾದ ವಿದ್ಯಮಾನಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ.ಇಷ್ಟೆಲ್ಲಾ ಒತ್ತಡಗಳಿದ್ದರೂ ಕಾಮಗಾರಿಗಳು ಮಾತ್ರ ತೀವ್ರಗತಿಯಲ್ಲಿ ನಡೆಯದೆ ಆಮೆಗತಿಯಲ್ಲಿ ನಡೆಯುತ್ತಿವೆ. ಗುಬ್ಬಿ ನಗರವೊಂದನ್ನು ಹೊರತು ಪಡಿಸಿ ಉಳಿದ ಎಲ್ಲಾ ಕಡೆಯೂ ಕಾಮಗಾರಿಗಳ ಪ್ರಗತಿ ತೃಪ್ತಿಕರವಾಗಿಲ್ಲ.

ವರ್ಷ ಕಳೆದರೂ ಅರ್ಧದಷ್ಟೂ ಖರ್ಚಾಗದ ಅನುದಾನ..!!!

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ನಡೆಯುತ್ತಿರುವ ಈ ಕಾಮಗಾರಿಗಳು ಹೊಸ ವರ್ಷ ಬಂದರೂ ಇನ್ನೂ ಮುಗಿಯುವ ಲಕ್ಷಣಗಳು ಕಾಣುತ್ತಿಲ್ಲ, ಒಳಚರಂಡಿ ಮತ್ತು ನೀರು ಸರಬರಾಜು ಕಾಮಗಾರಿಗಳಿಗೆಂದು ತುಮಕೂರು ಜಿಲ್ಲೆಯ ಕೆಲವು ಸ್ಥಳೀಯ ಸಂಸ್ಥೆಗಳಿಗೆ ಬರೋಬ್ಬರಿ 531.32 ಕೋಟಿ ರೂಪಾಯಿಗಳ ಅನುದಾನ ಇದೆ.ಇದರಲ್ಲಿ ಇನ್ನೂ 246.48 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಲಾಗಿದೆ. ಇಲಾಖೆಯೇ ನೀಡಿರುವ ಪ್ರಗತಿ ವರದಿಯಲ್ಲಿ ಭೌತಿಕ ಕಾಮಗಾರಿಗಳ ಶೇಕಡಾವಾರು ಪ್ರಗತಿಗೂ ಆರ್ಥಿಕ ಪ್ರಗತಿಗೂ ಸಾಮ್ಯತೆಯೇ ಇಲ್ಲವಾಗಿದೆ.

ಶಿರಾ ನಗರದ ಒಳಚರಂಡಿ ಯೋಜನೆಯ ಕಾಮಗಾರಿಗಳು ಈಗ ಪ್ರಗತಿಯಲ್ಲಿವೆ. ಇದಕ್ಕೆಂದು 35 ಕೋಟಿ ರೂಪಾಯಿಗಳ ಸಿದ್ಧ ಅನುದಾನವೂ ಲಭ್ಯವಿದೆ. ಇದರಲ್ಲಿ ಇಲ್ಲಿಯತನಕ 22 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ಇನ್ನುಳಿದ ಎರಡು ತಿಂಗಳಲ್ಲಿ ಉಳಿದ ಅಷ್ಟೂ ಅನುದಾನವನ್ನು ಖರ್ಚುಮಾಡಲು ಹರಸಾಹಸಪಡಬೇಕಾದ ಅನಿವಾರ್ಯತೆಯಿದೆ. ಭೌತಿಕವಾಗಿ 85 ಶೇಕಡಾ ಪ್ರಗತಿಯನ್ನು ಸಾಧಿಸಿರುವ ಶಿರಾ ತಾಲ್ಲೂಕಿನಲ್ಲಿ ಆರ್ಥಿಕ ಪ್ರಗತಿಯು ಶೇಕಡಾ 64 ರಷ್ಟಿದೆ. ತುಮಕೂರು ನಗರದ ಎರಡನೇ ಹಂತದ ಒಳಚರಂಡಿ ಯೋಜನೆಗೆಂದು 14.22 ಕೋಟಿ ರೂಪಾಯಿಗಳ ಅನುದಾನ ಲಭ್ಯವಿದೆ. ಇದರಲ್ಲಿ ಇಲ್ಲಿಯತನಕ 7 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ಇನ್ನುಳಿದ ಎರಡು ತಿಂಗಳಲ್ಲಿ ಉಳಿದ ಅಷ್ಟೂ ಅನುದಾನವನ್ನು ಖರ್ಚುಮಾಡಲು ಒದ್ದಾಡಬೇಕಿದೆ. ತರಾತುರಿಯಲ್ಲಿ ಕಾಮಗಾರಿಗಳನ್ನು ಮುಗಿಸಿ ಕೈತೊಳೆದುಕೊಳ್ಳುವ ಹುನ್ನಾರವನ್ನೂ ಇಲ್ಲಿ ತಳ್ಳಿಹಾಕುವಂತಿಲ್ಲ..ಭೌತಿಕವಾಗಿ 86 ಶೇಕಡಾ ಪ್ರಗತಿಯನ್ನು ಸಾಧಿಸಿರುವ ತುಮಕೂರು ನಗರದಲ್ಲಿ ಆರ್ಥಿಕ ಪ್ರಗತಿಯು ಶೇಕಡಾ 49 ರಷ್ಟಿದೆ. ವರ್ಷಾಂತ್ಯ ಸಮೀಪಿಸುತ್ತಿದ್ದು ಮುಂಬರುವ ವರ್ಷಕ್ಕೆ ಕಾಮಗಾರಿಗಳನ್ನು ಮುಂದೂಡುವ ಆತಂಕ ಎದುರಾಗಿದೆ.

ಗುಬ್ಬಿನಗರದ ಒಳಚರಂಡಿ ಯೋಜನೆಗೆಂದು 21.42 ಕೋಟಿ ರೂಪಾಯಿಗಳ ಅನುದಾನ ಲಭ್ಯವಿದೆ. ಇದರಲ್ಲಿ ಇಲ್ಲಿಯತನಕ 18.41 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ..ಭೌತಿಕವಾಗಿ 93 ಶೇಕಡಾ ಪ್ರಗತಿಯನ್ನು ಸಾಧಿಸಿರುವ ಗುಬ್ಬಿ ನಗರದಲ್ಲಿ ಆರ್ಥಿಕ ಪ್ರಗತಿಯು ಶೇಕಡಾ 85 ರಷ್ಟಿದೆ. ಕುಣಿಗಲ್ ಪಟ್ಟಣದ ಒಳಚರಂಡಿ ಯೋಜನೆಯ ಕಾಮಗಾರಿಗಳು ಈಗ ಪ್ರಗತಿಯಲ್ಲಿದ್ದು, >>> 7ನೇ ಪುಟಕ್ಕೆ

ಅಮೃತ್ ಯೋಜನೆಯ ಪ್ರಗತಿಗೂ ಗರ ಬಡಿದಿದೆ.!

ತುಮಕೂರು ನಗರದಲ್ಲಿ ಅನುಷ್ಠಾನವಾಗುತ್ತಿರುವ ಅಮೃತ್ ಯೋಜನೆಯ ಪ್ರಗತಿಯೂ ಕೂಡಾ ಅಷ್ಟೇನೂ ಆಶಾದಾಯಕವಾಗಿಲ್ಲ, ಈ ಯೋಜನೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಅವಕಾಶವಿದ್ದು ಅದರಲ್ಲಿ ಒಳಚರಂಡಿಯ ಕಾಮಗಾರಿಯೂ ಕೂಡಾ ಸೇರಿದೆ. ಸದರಿ ಯೋಜನೆಯ ಅನುದಾನದಲ್ಲಿ ತುಮಕೂರು ನಗರದ ವಿವಿಧ ಬಡಾವಣೆಗಳಲ್ಲಿ ಒಳಚರಂಡಿ ಕಾಮಗಾರಿಗಳು ನಡೆಯುತ್ತಿವೆ. ಇದಕ್ಕಾಗಿ 42.12 ಕೋಟಿ ರೂಪಾಯಿಗಳ ಹಣಕಾಸಿನ ನೆರವು ಕೂಡಾ ಪಾಲಿಕೆಗೆ ಇದೆ. ಇದರಲ್ಲಿ ಇಲ್ಲಿಯವರೆಗೂ ಆಗಿರುವ ಖರ್ಚು ಕೇವಲ 7 ಕೋಟಿ ಮಾತ್ರ. ಇನ್ನೂ ಸರಿಸುಮಾರು ಮೂವತ್ತೈದು ಕೋಟಿ ರೂಪಾಯಿಗಳ ಹಣವನ್ನು ಇನ್ನೆರಡು ತಿಂಗಳುಗಳಲ್ಲಿ ವೆಚ್ಚಮಾಡಬೇಕಾಗಿದೆ.

ಇದೇ ಅಮೃತ್ ಯೋಜನೆಯಲ್ಲಿ ನೀರು ಸರಬರಾಜು ಯೋಜನೆಗಳಿಗೆಂದು 42.94 ಕೋಟಿ ರೂಪಾಯಿಗಳ ಯೋಜನೆಯು ಜಾರಿಯಲ್ಲಿದೆ. ಈ ಯೋಜನೆಯಲ್ಲಿಯೂ ಕೂಡಾ ಪ್ರಗತಿಯು ಆಶಾದಾಯಕವಾಗಿಲ್ಲದ್ದು ಕಂಡುಬಂದಿದೆ. ಇದರಲ್ಲಿ 12.78 ಕೋಟಿ ಮಾತ್ರ ಖರ್ಚಾಗಿದೆ. ಪ್ರಗತಿಯೂ ಸಹಾ ಅರ್ಧದಷ್ಟೂ ಇಲ್ಲವಾಗಿದೆ. 30% ಆರ್ಥಿಕ ಪ್ರಗತಿಯೊಂದಿಗೆ ಯೋಜನೆಯು ನಿಧಾನಗತಿಯಲ್ಲಿ ಸಾಗುತ್ತಿದೆ.

ಅಧಿಕಾರ ಒಪ್ಪಂದ ವಿಷಯ :

ಗ್ರಾ.ಪಂ ಅಧ್ಯಕ್ಷೆ ಸದಸ್ಯೆ ನಡುವೆ ಜಗಳ

ಮಿಡಿಗೇಶಿ: ಗ್ರಾಪಂ ಅಧ್ಯಕ್ಷೆ ಹಾಗೂ ಸದಸ್ಯೆ ನಡುವೆ ನಡೆದ ಜಗಳ ಕೈ-ಕೈ ಮಿಲಾಯಿಸುವ ಹಂತಕ್ಕೆ ಹೋದ ಘಟನೆ ಮಿಡಿಗೇಶಿ ಗ್ರಾಪಂನಲ್ಲಿ ನಡೆದಿದೆ. ಗ್ರಾಮ ಪಂಚಾಯಿತಿಯ ಹಾಲಿ ಅಧ್ಯಕ್ಷೆ ಜಲಜಾಕ್ಷಿ ಇವರ ಪತಿ ಸುಧಾಕರ್ ರೆಡ್ಡಿರವರು ಹಾಗೂ ಗ್ರಾಮ ಪಂಚಾಯಿತಿ ಸದಸ್ಯೆ ಜಯಮ್ಮ ಹಾಗೂ ಈಕೆಯ ಸಂಬಂಧಿಕರ ನಡುವೆ ನಡೆದ ಮಾತಿನ ಚಕಮಕಿಯೊಂದಿಗೆ ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿತು. ಇದೇ ಜಗಳದ ವೇಳೆಗೆ ದೂರವಾಣಿ ಕರೆಯಂತೆ ಎ.ಎಸ್.ಐ. ತಾರಾಸಿಂಗ್ ಹಾಗೂ ಪೇದೆ ವಿನಯ್ ಗ್ರಾಮಪಂಚಾಯಿತಿ ಕಚೇರಿಗೆ ಬಂದು ಮುಂದೆ ಆಗಬಹುದಾದಂತಹ ಅನಾಹುತಗಳನ್ನು ತಪ್ಪಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷರ ಚುನಾವಣೆಯ ಸಂದರ್ಭದಲ್ಲಿ ನಿಯಮ ನಿಗದಿಯಂತೆ ಐದು ವರ್ಷಗಳ ಕಾಲ ಗ್ರಾಮಪಂಚಾಯಿತಿ ಅಧ್ಯಕ್ಷರ ಕಾಲಾವಧಿಯಾಗಿರುತ್ತದೆಯಾದರೂ ಗ್ರಾಮ ಪಂಚಾಯಿತಿ ಸದಸ್ಯರುಗಳು ಹಾಗೂ ಪ್ರಮುಖ ನಾಯಕರು ಒಟ್ಟಾಗಿ ಸೇರಿ ಮೊದಲು ಗ್ರಾಮಪಂಚಾಯಿತಿ ಅಧ್ಯಕ್ಷರಾದವರು ಎರಡೂವರೆ ವರ್ಷಗಳ ತರುವಾಯ ಈ ಮೇಲ್ಕಂಡಂತೆ ಸೂಚಿಸಿರುವಂತಹವರಿಗೆ ಅಧಿಕಾರ ಬಿಟ್ಟು ಕೊಡುವಂತೆ ಮೌಖಿಕ ಒಳ ಒಪ್ಪಂದವನ್ನು ಮಾಡಿಕೊಳ್ಳುವುದು ಬಹುತೇಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲೂ ನಡೆದು ಬರುತ್ತಿರುವ ವಿಷಯವಾಗಿರುತ್ತದೆ. ಅಧಿಕಾರ ವಹಿಸಿಕೊಂಡು ಅವಧಿ ಮೀರಿದ ಮೇಲೆ ಅಧಿಕಾರದ ಗದ್ದುಗೆಯನ್ನು ಬಿಟ್ಟು ಕೊಡಲು ಮೀನಾಮೇಷ ಎಣಿಸಿದ್ದು, ಅದರಲ್ಲಿ ಅಂತಹ ಗ್ರಾಮ ಪಂಚಾಯ್ತಿಯಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಗಲಭೆಗಳಾಗುವುದು ಸಹಜ.

ಅದೇ ರೀತಿಯಲ್ಲಿ ಜ.3 ರಂದು ಮಿಡಿಗೇಶಿ ಗ್ರಾಮ ಪಂಚಾಯ್ತಿಯ ಮುಂದೆ ಗಲಾಟೆ ನಡೆದಿರುತ್ತದೆ. ಹಾಲಿ ಅಧ್ಯಕ್ಷರ ಹಾಗೂ ಇಲ್ಲಿನ ನೌಕರರ ಮೇಲೆ ಆಪಾದನೆಗಳ ಸುರಿಮಳೆ ಗೈದರು. ಬೆಳಗಿನ ವೇಳೆ ಗ್ರಾಮ ಪಂಚಾಯ್ತಿಯ ಕೆಲಸ ಕಾರ್ಯಗಳನ್ನು ಮಾಡಬೇಕಾದ ಸಿಬ್ಬಂದಿಯವರು ರಾತ್ರಿ ಏಳು ಗಂಟೆಯಿಂದ ರಾತ್ರಿ ಹನ್ನೊಂದರ ಸಮಯದವರೆವಿಗೂ ಕೆಲಸ ನಿರ್ವಹಿಸುತ್ತಾರೆ. ಇದರ ಒಳ ಮರ್ಮವಾದರೂ ಏನು ಎಂಬುದು ಗ್ರಾಮಸ್ಥರ ಹಾಗೂ ಸದಸ್ಯೆ ಜಯಮ್ಮನವರ ಆರೋಪವಾಗಿರುತ್ತದೆ. ಹಾಗೂ ಸದರಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆಯವರಿಗೆ ಕನ್ನಡ ಬರೆಯಲು ಬಾರದ ಕಾರಣದಿಂದ ಗ್ರಾಮ ಪಂಚಾಯ್ತಿಯಲ್ಲಿನ ಪ್ರತಿ ಕೆಲಸ ಕಾರ್ಯಗಳನ್ನು ಅಧ್ಯಕ್ಷೆಯವರ ಪತಿಯವರೇ ಮಾಡುತ್ತಾರೆ ಎಂಬುದು ಆರೋಪ.

ಈ ಸಂದರ್ಭದಲ್ಲಿ ಜಯಮ್ಮ ಹಾಗೂ ಈಕೆಯ ಸಂಬಂಧಿಕರನ್ನು ಜಾತಿ ನಿಂದನೆ ಮಾಡಿರುತ್ತಾರೆ. ಈ ಬಗ್ಗೆ ಪೊಲೀಸ್ ಠಾಣೆಗೆ ಲಿಖಿತ ದೂರು ನೀಡುವುದಾಗಿಯೂ ಬಹಿರಂಗ ಹೇಳಿಕೆ ನೀಡಿರುತ್ತಾರೆ.

ಅಂಕು ಡೊಂಕು



ಸಾರ್, ನಿಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ನೈಟ್ ಕ್ಯಾಂಟೀನ್ ಜೊತೆಗೆ ನೈಂಟಿ (90) ಕ್ಯಾಂಟೀನ್ ಮಾಡ್ತೀರಾ ಅಂತಾರೆ ಜನರು.